**ದಿನಾಂಕ 27.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಮಾನ್ಯ ವಕೀಲರಿಂದ.**

ನಿಪಿ.1 ಮತ್ತು 2 ಬಸವರಾಜು ರವರ ಖಾತೆಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ಸದರಿ ದಾಖಲೆಯನ್ನು ನನಗೆ ಬಸವರಾಜ್ ರವರು ತೆಗೆದುಕೊಂಟ್ಟಿರುತ್ತಾರೆ. ನಿಪಿ.3 ಅನ್ನು ಆರೋಪಿಯೇ ಬರೆದು ತಂದು ಕೊಟ್ಟಿದ್ದರು. ನಿಪಿ.3 ರಲ್ಲಿನ ಬರವಣಿಗೆ ನನ್ನದು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕೆನರಾ ಬ್ಯಾಂಕ್ ಆಕೌಂಟ್ ಸ್ಟೇಟ್ ಮೆಂಟ್ ನಲ್ಲಿ ದಿಃ06.07.2020, 03.08.2020, 13-11-2020, 04-01-2021, 28-01-2021, 08.03.2021 ರಲ್ಲಿ ಆರೋಪಿಯ ಖಾತೆಯಿಂದ ನನ್ನ ಖ-ತೆಗೆ 18,000/- ಹಣ ಬಂದಿರುತ್ತದೆ ಎಂದರೆ ಸರಿ.

ಹರ್ಷಿತ ಎಂದರೆ ನನ್ನ ಮಗಳು. ದಿಃ28.09.2020 ರಂದು ನನ್ನ ಮಗಳ ಕೆನರಾ ಬ್ಯಾಂಕ್ ಖಾತೆಗೆ ಆರೋಪಿಯು 18,000/- ಹಣವನ್ನು ವರ್ಗಾಯಿಸಿರುತ್ತಾರೆ ಎಂದರೆ ಸರಿ. ಸದರಿ ಹಣವನ್ನು ನಾನು ಹೇಳಿದ ಮೇರೆಗೆ ನನ್ನ ಮಗಳ ಖಾತೆಗೆ ವರ್ಗಾಹಿಸಿದ್ದಾರೆ ಎಂದರೆ ಸರಿ. ಆರೋಪಿ ಒಟ್ಟು 1,26,000/- ಹಣವನ್ನು ನನ್ನ ಅಕೌಂಟ್ ಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿ. ಆರೋಪಿ ತೆಗೆದುಕೊಂಡಿದ್ದ 2,00,000/- ಹಣದಲ್ಲಿ 74,000/- ಹಣವನ್ನು ನಗದಿನ ಮೂಲಕ ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆರೆವಾೇಪಿ ನನಗೆ ಕೊವಾಡಬೇಕಾದ ಹಣವನ್ನು ಸಂಪೂರ್ಣವಾಗಿ ಮರುಪಾವತಿ ಮಾಡಿದ್ದರು ಸಹ, ಭದ್ರತೆಗಾಗಿ ನೀಡಿದ್ದ ಚೆಕ್ ಅನ್ನು ದುರ್ಬಳಕ್ಕೆ ಮಾಡಿಕೊಂಡು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-3.pdf

ನನಗೆ 6,00,000/- ಹಣವನ್ನು ಸಾಲವಾಗಿ ಕೊಡುವ ಆರ್ಥಿಕ ಚೈತನ್ಯ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬಸವರಾಜು ರವರ ಜೊತೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ.ಒ)**

**12 ನೇ ಎಸ್‌ಸಿಜೆ ಮತ್ತು ಎಸಿಎಮ್‌ಎಮ್**

**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-3.pdf

www.ecourtsindia.com